International Journal of Kannada Research
www.kannadajournal.com

ISSN: 2454–5813
IJKR 2017; 3(4): 33-36
© 2017 IJKR
www.kannadajournal.com
Received: 09-08-2017
Accepted: 10-09-2017

**Dr. Buddappa Singe**
Associate Professor In Kannada
Govt Degree College
Yadgir, Karnataka, India

**Correspondence**
**Dr. Buddappa Singe**
Associate Professor In Kannada
Govt Degree College
Yadgir, Karnataka, India

# ಮೈಲಾರ ಲಿಂಗನ ಕಾವ್ಯ

**Dr. Buddappa Singe**

ಗೊರವ ಸಂಪ್ರದಾಯದವರು ಮೈಲಾರಲಿಂಗನ ಕಾವ್ಯವನ್ನು ಹಾಡುತ್ತಾರೆ. ಹೈದ್ರಾಬಾದ ಕರ್ನಾಟಕದಲ್ಲಿ 'ಗೊರವ' ಸಂಪ್ರದಾಯದ ದೊಡ್ಡ ಪರಂಪರೆಯೇ ಇದೆ. ಇಲ್ಲಿಯ ಜನ ಮೈಲಾರಲಿಂಗನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಮೈಲಾರಲಿಂಗನ ಸಂಪ್ರದಾಯದ ಹಾಡುಗಾರರನ್ನು ಧಾರ್ಮಿಕ ವೃತ್ತಿ ಗಾಯಕರೆಂದು ಗುರುತಿಸಲಾಗಿದೆ. ಇಡೀ ರಾತ್ರಿ ಹಾಡು ಹೇಳುತ್ತಿದ್ದರೆ ಬೆಳಗಾಗುವುದೇ ಗೊತ್ತಾಗುವುದಿಲ್ಲ. ಇವರ ತಂಡದಲ್ಲಿ ಮೂರು ನಾಲ್ಕು ಗೊರವರು ಸೇರಿಕೊಂಡು ಕಾವ್ಯ ಹಾಡಿ ಹರಸುತ್ತಾರೆ. ಮಧ್ಯದಲ್ಲಿದ್ದ ಪ್ರಮುಖ ಹಾಡುಗಾರರ ಕೈಯಲ್ಲಿ ಡಮರುಗ ಬಾರಿಸುತ್ತ, ಕಾವ್ಯದ ಕಥೆಯನ್ನು ರೂಪಿಸುತ್ತಾ ಹೋಗುತ್ತಾನೆ. ಹಿಮ್ಮೇಳದವರು ಮುಮ್ಮೇಳದವನ ಪಲ್ಲವಿಯನ್ನು ಮತ್ತೊಮ್ಮೆ ಮರುಕಳಿಸುತ್ತಾರೆ.

ಮೈಲಾರಲಿಂಗನ ಸಂಪ್ರದಾಯ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಗೋವಾ, ಕೇರಳ ರಾಜ್ಯಗಳಲ್ಲಿ ವ್ಯಾಪಕವಾಗಿ ರೂಢಿಯಲ್ಲಿದೆ. ಯಾವುದೇ ಕುಲಗೋತ್ರಗಳಿಲ್ಲದೆ ಜನರು ಮೈಲಾರಲಿಂಗನಿಗೆ ನಡೆದುಕೊಳ್ಳುತ್ತಾರೆ. ಹೆಚ್ಚಾಗಿ ಕುರುಬ ಜನಾಂಗ ಮೈಲಾರಲಿಂಗನನ್ನು ತಮ್ಮ ಆರಾಧ್ಯ ದೇವರನ್ನಾಗಿ ಪೂಜಿಸುತ್ತಾರೆ. ಆ ಜನರ ಜೀವನದಲ್ಲಿ ಹಾಸು ಹೊಕ್ಕಾಗಿರುವ ಮೈಲಾರಲಿಂಗನ ಮಹಾಕಾವ್ಯವನ್ನು ಹಾಡುಗಾರರು ಭಕ್ತಿ ಭಾವದಿಂದ ಹಾಡುತ್ತಾರೆ. ದುಷ್ಟರ ಸಂಹಾರ ಶಿಷ್ಟರ ರಕ್ಷಣೆಗಾಗಿ ಆತ ಮೆರೆದ ಅನೇಕ ಪವಾಡಗಳು ಜನಮನದಲ್ಲಿ ಭಕ್ತಿ ಭಾವವನ್ನು ಮೂಡಿಸುತ್ತವೆ.

ಹೀಗೆ ಹಲವಾರು ಅಂಶಗಳನ್ನು ಇಟ್ಟುಕೊಂಡು ಬೆಳೆದು ಬಂದ ಈ ಮಹಾಕಾವ್ಯ ಪರಂಪರೆ ಕನ್ನಡದ ಅತ್ಯುತ್ತಮ ಜನಪದ ಮಹಾಕಾವ್ಯ ಪರಂಪರೆಗಳಲ್ಲಿ ಒಂದಾಗಿದೆ. ಇತ್ತೀತ್ತಲಾಗಿ ಪ್ರಕಟವಾದ ಶ್ರೀ ಮಂಜುನಾಥ ಬೇವಿನಕಟ್ಟಿಯವರ ವಗ್ಗರು, ಹನುಮಂತಪ್ಪ ಹಾಡಿದ 'ಮೈಲಾರಲಿಂಗನ ಕಾವ್ಯ' ಸಂಗ್ರಹ, ಮೈಲಾರಲಿಂಗನ ಪದಗಳು ಮತ್ತು ಎಂ.ಬಿ. ನೇಗಿನಾಳರು ಈ ಕ್ಷೇತ್ರಗಳಿಗೆ ಸಂಬಂಧಿಸಿ ಸಂಗ್ರಹಿಸಿದ ಕಾವ್ಯಗಳು ಗಮನಾರ್ಹವಾಗಿವೆ. ಈ ಮೈಲಾರಲಿಂಗನ ಕಾವ್ಯ ಕುರುಬ ಸಂಪ್ರದಾಯಕ್ಕೆ ಸಂಬಂಧಿಸಿದರೂ ಡೊಳ್ಳಿನ ಹಾಡುಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ಮೈಲಾರನ ಧಾರ್ಮಿಕ ಭಕ್ತರಾದ ಗೊರವರು ಈ ಕಾವ್ಯ ಹಾಡುತ್ತಾರೆ. ಮೈಲಾರಲಿಂಗನ ಕಾವ್ಯದಲ್ಲಿ ಬರುವ ಗಂಗಿ ಮಾಳಮ್ಮನ ಕಥೆ ಪ್ರಾದೇಶಿಕ ಭಿನ್ನತೆಯಿಂದ ಬೇರೆ ಬೇರೆ ರೂಪ ಪಡೆಯುತ್ತದೆ. "ಶುದ್ಧ ಜನಪದ ಕಥೆ" "ಗಂಗಿ ಮಾಳಮ್ಮನ ಸಂಧಿ" ಈ ಕಥೆಗಳಿಗಿಂತ ಭಿನ್ನವಾದ ಕಾವ್ಯ ಹೈದ್ರಾಬಾದ ಕರ್ನಾಟಕದಲ್ಲಿಯ ಮೈಲಾರ ಕ್ಷೇತ್ರಗಳಿಗೆ ಸಂಬಂಧಿಸಿ ಹಾಡಿರುವ ಹಾಡುಗಳಲ್ಲಿ ಗುರುತಿಸಬಹುದಾಗಿದೆ.

ಭೂಲೋಕದಲ್ಲಿ ಮಣಿ ಮಲ್ಲಾಸೂರನೆಂಬ ದೈತ್ಯನು ತಪಸ್ಸು ಮಾಡಿ ಸಪ್ತ ಋಷಿಗಳನ್ನು ಕಾಡತೊಡಗಿದ. ಅವನ ಉಪಟಳ ತೊಲಗಿಸಲು ಸ್ವತಃ ವಿಷ್ಣು ಮೊದಲಾದ ದೇವತೆಗಳಿಗೂ ಸಾಧ್ಯವಾಗುವುದಿಲ್ಲ. ಕೊನೆಗೆ ಶಿವನಲ್ಲಿ ಮೊರೆ ಹೋಗುತ್ತಾರೆ. ದೈತ್ಯನ ದೌರ್ಜನ್ಯ ಕೇಳಿ ಸಂಹಾರ ಮಾಡಲು ಶಿವ ಮಲ್ಲಯ್ಯನಾಗಿ ಕೈಲಾಸದಿಂದ ಮರ್ತ್ಯ ಲೋಕಕ್ಕೆ ಬರುತ್ತಾನೆ. ದೈತ್ಯನ ಸಂಹಾರ ಮಾಡಲು ಭಂಡಾರವೇ ಮರೆತು ಬರುತ್ತಾನೆ. ಭಂಡಾರಕ್ಕಾಗಿ ನಾಡೆಲ್ಲ ಸಂಚರಿಸುತ್ತಾನೆ. ಮಲ್ಲಯ್ಯನ ಅಲೆದಾಟ ಕಂಡು "ಹೆಗ್ಗಣ ಪ್ರಧಾನಿ" ಅಣ್ಣಿಗೆರೆ ಎಂಬ ಗ್ರಾಮದಲ್ಲಿ ಗಂಗಿ ಮಾಳಮ್ಮ ಎಂಬ ಕನ್ಯೆ ಇದ್ದಾಳೆ. ಅವಳಲ್ಲಿ ಭಂಡಾರ ದೊರೆಯುತ್ತದೆಂದು ಹೇಳಿಕೊಡುತ್ತಾನೆ. ಶಿವನ ಸ್ವರೂಪಿಯಾದ ಮಲ್ಲಯ್ಯ ಅಣ್ಣಿಗೇರೆ ಹುಡುಕುತ್ತಾ ಬಂದು ಬಳೆ ವ್ಯಾಪಾರ ಪ್ರಾರಂಭಿಸುತ್ತಾನೆ. ದೊಡ್ಡ ಡೇರ್‍ಯಾದಲ್ಲಿ ಹಸಿರು, ಬಿಳಿ, ಚಿಕ್ಕೆ ಬಳೆ, ಕಡ್ಡಿ ಬಿಲ್ವಾರಿ, ಕೆಂಪು ಗುಲಾಬಿ ಹೀಗೆ ನಾನಾ ತರದ ಬಳೆಗಳು ಇಟ್ಟು ಸಿಂಗರಿಸಿ ನಾರಿಯರಿಗೆಲ್ಲ ಆಕರ್ಷಣೆ ಮಾಡುತ್ತಾನೆ. ತವರಿನ ಹೆಣ್ಣುಮಕ್ಕಳು, ಅತ್ತೆಮನಿ ಸೊಸ್ತೇರು ಬಾವಿಯ ನೀರಿಗೆ ಬಂದು ಬಳೆ ತೊಡಿಸಿಕೊಂಡು ಹೋಗುತ್ತಾರೆ.

ಗೆಳತಿಯರಿಂದ ಗಂಗಿ ಮಾಳಮ್ಮನಿಗೆ ಬಳೆಗಳ ಸಮಾಚಾರ ತಿಳಿಯುತ್ತದೆ. ನಾನಾತರದ ಬಳೆಗಳನ್ನು ಹಾಕಿಕೊಳ್ಳುವ ಹಂಬಲದಿಂದ ಗಂಗಿ ಮಾಳಮ್ಮ ಬಾವಿ ಕಡೆಗೆ ಇದ್ದ ಡೇರ್‍ಯಾಕ್ಕೆ ಬರುತ್ತಾಳೆ. ಮಲ್ಲಯ್ಯ ಗಂಗಿ ಮಾಳಮ್ಮನನ್ನೂ ಡೇರ್‍ಯಾದ ಒಳಗೆ ಕರೆದು ನಾನಾ ತರದ ಬಳೆಗಳು ಮುಂಗೈವರೆಗೆ ತೊಡಿಸುತ್ತಾನೆ. ಸುಂದರ ರೂಪಿಯಾದ ಮಲ್ಲಯ್ಯನಿಗೆ ಮಾಳಮ್ಮ ಮನ ಸೋಲುತ್ತಾಳೆ. ಕೈಲಾಸವನ್ನು ಬಿಟ್ಟು ಭೂಲೋಕಕ್ಕೆ ಬರಲು ಕಾರಣವೇನು ಯಾತಕ್ಕಾಗಿ ಬಂದಿರುವಿರಿ ಎಂದು ಮಾಳಮ್ಮ ಕೇಳುತ್ತಾಳೆ. ಮಣಿ ಮಲ್ಲಾಸೂರನೆಂಬ ದೈತ್ಯನ ಉಪಟಳವನ್ನು ಸಂಹಾರ ಮಾಡಲು ಬಂದಿರುವೆ. ಬರುವಾಗ ನಾನು ಭಂಡಾರ ಚೀಲ ಮರೆತು ಬಂದಿರುವೆ. ಅದು ನಿನ್ನಲ್ಲಿ ದೊರೆಯುವುದಾಗಿ ತಿಳಿದು ಇಲ್ಲಿಗೆ ಬಂದಿರುವೆ. ಗಂಗಿ ಮಾಳಮ್ಮ ಮಲ್ಲಯ್ಯನಿಗೆ ಒಂದು ಷರತ್ತು ಹಾಕುತ್ತಾಳೆ. ನಿನಗೆ ಭಂಡಾರ ಬೇಕಾದರೆ ನನ್ನನ್ನು ಲಗ್ನವಾಗಬೇಕು. ನಾನು ನಿನ್ನ ಬೆನ್ನ ಹಿಂದೆ ಬರುತ್ತೇನೆ ಎಂದು ಹೇಳುತ್ತಾಳೆ. ಪರ ಪುರುಷನೊಂದಿಗೆ ಏಕಾಂತದಲ್ಲಿ ಮಾತನಾಡುವುದು ಸಹಿಸದೆ ಗಂಗಿ ಮಾಳಮ್ಮನ ತಾಯಿ ಬಂದು ತಲೆ ಕೂದಲು ಹಿಡಿದು, ಬಡಿದು ಮನೆಗೆ ಕರೆತರುತ್ತಾಳೆ. ಗಂಗಿ ಮಾಳಮ್ಮ ತನ್ನ ಮನೆ ಕಡೆ ಬರಲು ಮಲ್ಲಯ್ಯನಿಗೆ ಸೂಚಿಸುತ್ತಾಳೆ.

ಗಂಗಿ ಮಾಳಮ್ಮ ಜಳಕ ಮುಗಿಸಿ ಸಿಂಗರಿಸಿಕೊಂಡು ಉಪ್ಪರಿಗೆಯ ಮೇಲೆ ಕೂದಲು ಒಣಗಿಸುತ್ತಾ ನಿಲ್ಲುತ್ತಾಳೆ. ಮಲ್ಲಯ್ಯ ಬಳೆಗಳನ್ನು ಕಟ್ಟಿಕೊಂಡು ಅವಳ ಮನೆಯ ಮುಂದೆ ಹಾದು ಹೋಗುತ್ತಾನೆ. ಗಂಗಿ ಮಾಳಮ್ಮ ಉಡಿಯಲ್ಲಿ ಭಂಡಾರ ಕಟ್ಟಿಕೊಂಡು ಮಲ್ಲಯ್ಯನ ಬೆನ್ನ ಹತ್ತುತ್ತಾಳೆ. ಇಬ್ಬರು ಯಾದಗಿರಿ ಮೈಲಾಪೂರಕ್ಕೆ ಬಂದು ಮದುವೆಯಾಗಲು ಸಿದ್ಧರಾಗುತ್ತಾರೆ. ಮಾಳಮ್ಮನ ನಾಲ್ಕು ಜನ ಸಹೋದರರು ಮನೆಗೆ ಬಂದು ತಂಗಿ ಎಲ್ಲಿ ಇದ್ದಾಳೆಂದು ಕೇಳುತ್ತಾರೆ.

ತಾಯಿ ಮಲ್ಲಯ್ಯನ ಹಿಂದೆ ಮೂಡಲ ದಿಕ್ಕಿನ ಗುಡ್ಡದ ಕಡೆಗೆ ಹೋದ ವಿಷಯ ತಿಳಿಸುತ್ತಾಳೆ. ನಾಲ್ಕು ಜನ ಸಹೋದರರು ಸಿಟ್ಟಿನಿಂದ ಬಡಿಗೆ, ಕತ್ತಿ ಹಿಡಿದು ಗುಡ್ಡದ ಕಡೆಗೆ ಬರುತ್ತಾರೆ. ಮಲ್ಲಯ್ಯ ಗಂಗಿ ಮಾಳಮ್ಮರ ಮದುವೆ ಪ್ರಾರಂಭವಾಗುವಷ್ಟರಲ್ಲಿ ನಾಯಿಗಳು ಅವರ ಮೇಲೆ ಬಿಡುತ್ತಾರೆ. ಮದುವೆ ನಿಂತು ಹೋಗುತ್ತದೆ. ಮಾಳಮ್ಮ ಸಹೋದರರ ಜೊತೆಗೆ ಬರಲು ತಿರಸ್ಕರಿಸಿ, "ಒಮ್ಮೆ ಮುಂದೆ ಇಟ್ಟ ಹೆಜ್ಜೆಯನ್ನು ಹಿಂದಕ್ಕಿಡುವುದಿಲ್ಲ" ಎಂದು ಹೇಳಿ ಅಣ್ಣಂದಿರಿಗೆ ಡೊಣಿ ಹಿಡಿದು ವಗ್ಗಯ್ಯರಾಗಿರಿ ಎಂದು ಶಾಪ ಹಾಕುತ್ತಾಳೆ. ನಾಲ್ಕು ಜನರು ಕೈಯಲ್ಲಿ ಡೊಣಿ, ಕೊರಳಿಗೆ ಕವಡೆ, ಹಣೆಗೆ ವಿಭೂತಿ, ಭಂಡಾರ ಬಳಿದುಕೊಂಡು ನಾಯಿಗಳಂತೆ ಬೊಗಳುತ್ತಾ ಗುಡ್ಡದಲ್ಲಿಯೇ ವಾಸವಾಗುತ್ತಾರೆ.

ಮಲ್ಲಯ್ಯ ಯಾದಗಿರಿ ಮೈಲಾಪೂರ ಬಿಟ್ಟು ಗಂಗಿ ಮಾಳಮ್ಮನೊಂದಿಗೆ ದೇವರ ಹಿಪ್ಪರಗಿಗೆ ಬಂದು ನೆಲೆ ನಿಲ್ಲುತ್ತಾನೆ.

"ಯಾತಗಿರಿಯೋ ಪರವತಗಿರಿಯೋ
ಮಲ್ಲಯ್ಯ ತಿರಗಿದನೋ । ಮೈಲಾರಲಿಂಗ
ಏಳ ಎಪ್ಪತ್ತ ಗಿರಿಗಳ ಸ್ಥಾಪನ
ಮಾಡ್ಯಾನ ಮಲ್ಲಯ್ಯನೋ । ಮೈಲಾರಲಿಂಗ
ಹಿಪ್ಪರಿ ಗ್ರಾಮಕ ಬಂದಿದನೆನೋ
ಬವಳೆ ಮಲ್ಲಯ್ಯನೋ । ಮೈಲಾರಲಿಂಗ
ಜಾಗವ ನೋಡಿ ಪಾಯವ ಹಾಕಿದನೇನೋ
ಹೊನ್ನ ಹಿಪ್ಪರಿಗೋ । ಮೈಲಾರಲಿಂಗ
ಹೊನ್ನ ಹಿಪ್ಪರಿಗಿ ಬಯಲಾಗ
ನೆನದಾನ ಬವಳೆ ಮಲ್ಲಯ್ಯನೋ । ಮೈಲಾರಲಿಂಗ"

ಇಲ್ಲಿಂದ ಕಾವ್ಯ ಹಿಪ್ಪರಗಿಗೆ ಹರಿದು ಬರುತ್ತದೆ. ಮಲ್ಲಯ್ಯ ಸಪ್ತೇಳು ಗಿರಿಗಳನ್ನು ಸುತ್ತಾಡಿ ಹಿಪ್ಪರಗಿ ಗ್ರಾಮಕ್ಕೆ ಬಂದು ಊರ ಹೊರಗಿನ ಬಯಲು ಜಾಗದಲ್ಲಿ ನೆಲೆ ನಿಲ್ಲುತ್ತಾನೆ. ಅಲ್ಲಿ ಲಿಂಗ ಸ್ಥಾಪನೆ ಮಾಡಿ ಹೂವಿನ ತೋಟ ತಯ್ಯಾರ ಮಾಡಿ ಇಮಾರತಿ ಕಟ್ಟಿಸಲು ಪ್ರಾರಂಭಿಸುತ್ತಾನೆ. ಈ ಕುರಿತು ಅನೇಕ ಜನಪದ ಕಥೆಗಳು ಕೇಳಿ ಬರುತ್ತವೆ.

ಅಲ್ಲದೆ ಇಲ್ಲಿಯ ಅನೇಕ ಐತಿಹಾಸಿಕ ಅಂಶಗಳ ಮೇಲೆ ಬೆಳಕು ಚಲ್ಲುವಂತೆ ಇದೆ. ಈ ಕತೆಗಳಿಗೂ ದೇವರ ಹಿಪ್ಪರಗಿ ಗ್ರಾಮದಲ್ಲಿ ನಡೆಯುವ ಧಾರ್ಮಿಕ ಆಚರಣೆಗಳಿಗೂ ಸಾಮ್ಯವಿದೆ. ಅವುಗಳ ಅಧ್ಯಯನದಿಂದ ಇತಿಹಾಸದಲ್ಲಿ ಅಡಗಿ ಕುಳಿತಿರುವ ಸತ್ಯವನ್ನು ಹೊರಗೆಡುವಬಹುದು. ಇಲ್ಲಿಯ ಮಲ್ಲಯ್ಯ ಮತ್ತು ರಾವುತರಾಯರ ಗುಡಿಗಳು ಭಕ್ತರ ಆಕರ್ಷಣೆಯ ಸ್ಥಳಗಳಾಗಿವೆ. ಇವೆಲ್ಲ ಚರಿತ್ರೆಯನ್ನು ಕಾವ್ಯದಲ್ಲಿ ಕಣ್ಣಿಗೆ ಕಾಣುವಂತೆ ಹಾಡುಗಾರ ಬೆಳೆಸಿಕೊಂಡು ಬರುತ್ತಾನೆ.

ಪುಂಡ ಪೋಕರಿಗೆ ಹೆಸರಾದ ಧರಯ್ಯನೆಂಬ ಮುಚಂಡಿಯ ದೈತ್ಯ ಮಲ್ಲಯ್ಯನಿಗೆ ನಾನಾ ರೀತಿಯಿಂದ ಕಾಡತೊಡಗುತ್ತಾನೆ. ಮಲ್ಲಯ್ಯ ಕಟ್ಟಿಸಿದ ಇಮಾರತಿ, ಹೂವಿನ ತೋಟ ಹಾಳು ಮಾಡಿ ಅನೇಕ ಕೀಟಲೆ ಕೊಡುತ್ತಿರುತ್ತಾನೆ. ಮಲ್ಲಯ್ಯನಿಗೆ ಏನು ಮಾಡಬೇಕೆಂಬುದು ತೋಚದೆ ಚಿಂತೆಯಲ್ಲಿ ಮುಳುಗುತ್ತಾನೆ.

ಬಂಟ ರಾವುತರಾಯ ಚಟ್ಟರಕಿಯನ್ನು ತೊರೆದು ಹಿಪ್ಪರಗಿ ಗ್ರಾಮಕ್ಕೆ ಬಂದು ಅವತಾರ ತಾಳುತ್ತಾನೆ. ಬಂಗಾರದ ಚೌಕ ಎದಿಯ ಮ್ಯಾಲ ಹಾಕಿಕೊಂಡು ರುದ್ರ ರಕ್ಕಸಿ ರುಂಡ ಮಾಲೆಗಳು ಕೊರಳಿಗೆ ಧರಿಸಿ ಗಂಧದ ಬಟ್ಟು, ಈಬತ್ತಿ, ಭಂಡಾರ ಹಣೆಗೆ ಹಚ್ಚಿಕೊಂಡು ತಲೆಗೆ ಮುಂಡಾಸ ಸುತ್ತಿ ಹತ್ತು ಬೆರಳಿಗೆ ಹತ್ತು ಉಂಗುರಗಳನ್ನು ಇಟ್ಟುಕೊಂಡು ಕತ್ತಿ ಕಠಾರಿ ಕೈಯಲ್ಲಿ ಹಿಡಿದು ತೇಜಿಯ ಏರಿ ಮಲ್ಲಯ್ಯನ ಗುಡಿಗೆ ಬರುತ್ತಾನೆ.

ಚಿಂತೆಯಲ್ಲಿ ಕುಳಿತ ಮಲ್ಲಯ್ಯನಿಗೆ ರಾವುತರಾಯ ನಮಸ್ಕಾರ ಮಾಡುತ್ತಾನೆ. ಮಲ್ಲಯ್ಯ ರಾವುತರಾಯನ ದೈತ್ಯ ರೂಪ ನೋಡಿ ಯಾವ ಕಾರಣಕ್ಕಾಗಿ ಈ ಕಡೆಗೆ ಬಂದಿರುವೆ ಎಂದು ಕೇಳುತ್ತಾನೆ. ಚಟ್ಟರಕಿಯ ಗಚ್ಚಿನ ಮನಿ ಗೌಡ ನನಗೆ ಜಾಗ ಕೊಡದ ಕಾರಣ ಶಾಪ ಕೊಟ್ಟು ಈ ಕಡೆಗೆ ಸಂಚಾರ ಮಾಡುತ್ತಾ ಬಂದಿದ್ದೇನೆ. ನನಗೆ ನಿಮ್ಮಲ್ಲಿಯೇ ಸ್ವಲ್ಪ ಜಾಗ ಕೊಟ್ಟರೆ ಇಲ್ಲಿಯೇ ವಾಸವಾಗಿರುವುದಾಗಿ ಹೇಳುತ್ತಾನೆ. ಮಲ್ಲಯ್ಯ ತನ್ನ ಎಡದಲ್ಲಿ ಸ್ವಲ್ಪ ಜಾಗ ಕೊಡುತ್ತಾನೆ. ರಾವುತರಾಯ ಒಂದೆರಡು ದಿನ ವಸ್ತಿ ಕಳೆದ ಮೇಲೆ ಮಲ್ಲಯ್ಯನ ಚಿಂತೆ ದೂರ ಮಾಡುವುದಾಗಿ ಹೇಳುತ್ತಾನೆ. ಪುಂಡ ಪೋಕರಿಗೆ ಹೆಸರಾದ ಮುಚಂಡಿ ಧರಿಯಪ್ಪನ ಕಾಟ ತಪ್ಪಿಸುತ್ತೇನೆ. ನನಗೆ ಏನು ಕೊಡುತ್ತೀರಿ ಎಂದು ರಾವುತರಾಯ ಕೇಳುತ್ತಾನೆ. ಬವುಳೆ ಮಲ್ಲಯ್ಯ ಬೇಡಿದ್ದು ಕೊಡುವುದಾಗಿ ವಚನ ಕೊಡುತ್ತಾನೆ. ವಚನ ಪಡೆದುಕೊಂಡು ರಾವುತರಾಯ ಕತ್ತಿವರಿಯ ಕೈಯಲ್ಲಿ ಹಇಡಿದು ತೇಜಿ ಏರಿ ಇಮಾರತಿಯ ಕಾವುಲಕ್ಕೆ ನಿಲ್ಲುತ್ತಾನೆ.

ಮಧ್ಯರಾತ್ರಿಯಲ್ಲಿ ಮುಚಂಡಿ ಧರೆಪ್ಪ ಕುದುರೆ ಏರಿ ಮಲ್ಲಯ್ಯನಿದ್ದ ಸ್ಥಳಕ್ಕೆ ಬರುತ್ತಾನೆ. ರಾವುತರಾಯ ಅವನನ್ನು ತಡೆದು ಇಮಲ ಕೆಡವಲು ನೀನು ಯಾರು? ನನ್ನನ್ನು ಕೇಳಲು ನೀನು ಯಾರು? ಹೀಗೆ ಇಬ್ಬರ ಮಧ್ಯ ವಾದದ ಸ್ಪರ್ಧೆಯೇ ನಡೆಯುತ್ತದೆ. ನಂತರ ಇಬ್ಬರ ಪರಸ್ಪರ ಪರಿಚಯವಾಗುತ್ತದೆ. ರಾವುತರಾಯ ತನ್ನ ಜೊತೆಗೆ ಲಡಾಯಿ ಮಾಡಿ ಇಮಲ (ಇಮಾರತಿ ಕಟ್ಟಡ) ಕೆಡವಲು ಹೇಳುತ್ತಾನೆ. ಧರೆಪ್ಪ ಮುಗುಳುನಗೆ ನಕ್ಕು ನೀನು ನನಗೆ ಸಣ್ಣ ಕಂದ, ಇನ್ನೂ ತಲೆಯ ಮಾಸ ಹಾರಿಲ್ಲ, ನನ್ನ ಜೊತೆ ಜಿದ್ದು ತೊಡಬ್ಯಾಡ ಎಂದು ಅರಹುತ್ತಾನೆ. ಭಂಡ ರಾವುತರಾಯ ಲಡಾಯಿ ಮಾಡುವುದಾಗಿ ಹೇಳುತ್ತಾನೆ. ಇಬ್ಬರ ಮಧ್ಯ ಲಡಾಯಿ ಪ್ರಾರಂಭವಾಗುತ್ತದೆ. ಮುಚಂಡಿ ಧರೆಪ್ಪ ಸೋಲು ಒಪ್ಪಿ ಬಾಯಲ್ಲಿ

ಹುಲ್ಲು ಹಿಡಿದು ಶರಣನಾಗುತ್ತಾನೆ. "ನಿನಗೆ ಜೀವ ದಾನ ಮಾಡಿದ್ದೇನೆ ಬದುಕಿಕೋ" ಎಂದು ರಾವುತರಾಯ ಧರೆಪ್ಪನನ್ನು ಬಿಡುತ್ತಾನೆ. ರಾವುತರಾಯ ತನ್ನ ತೇಜಿಯನ್ನು ಕಟ್ಟಿ ಹೋದ ಸಂದರ್ಭದಲ್ಲಿ ಧರೆಪ್ಪ ಮೋಸದಿಂದ ರಾವುತರಾಯನ ತೇಜಿಯ ಬಾಲ ಕಡಿದು ಹಾಕುತ್ತಾನೆ. ತೇಜಿಯ ರಕ್ತ ಹರಿದು ಹೋಗುತ್ತಿರುವುದನ್ನು ಕಂಡು ರಾವುತರಾಯ ಸಿಟ್ಟಿಗೆ ಬರುತ್ತಾನೆ. ಎದುರು ನಿಂತು ಲಡಾಯಿ ಮಾಡಿಲ್ಲ ನಿರಪರಾಧಿ ಪ್ರಾಣಿಯನ್ನು ಹೊಡೆಯುವುದು ಹೇಡಿಯ ಕೆಲಸ. ಇವನನ್ನು ಎಲ್ಲಿಗೆ ಹೋದರು ಬಿಡಬಾರದು ಕಡಿದು ಹಾದಿ ಬೀದಿಗೆ ಇವನ ರುಂಡ ಮುಂಡ ಕೆಡವಬೇಕೆಂದು ಖಡ್ಗ ಹಿರಿಯುತ್ತಾನೆ. ತೇಜಿಯ ಮೇಲೆ ಕುಳಿತು ಧರೆಪ್ಪನನ್ನು ಬೆನ್ನಟ್ಟುತ್ತಾನೆ.

ಅಣ್ಣ ಧರೆಪ್ಪ ಯುದ್ಧ ಮಾಡಿ ಬರುತ್ತಾನೆಂದು ತಿಳಿದು ಕಂಚ ಕಳಸ ತುಂಬಿಕೊಂಡು ಅಣ್ಣನ ಭೇಟಿಗೆ ಜಕ್ಕಮ್ಮ-ಲಕ್ಕಮ್ಮರು ಬರುತ್ತಾರೆ.

"ಮುಚಂಡಿ ಧರೆಪ್ಪ ಹೇಳತಾನ
ತಮ್ಮ ತಂಗಿದೆರಿಗೋ । ಮೈಲಾರಲಿಂಗ।
ಹಿಂದ ದೈತ್ಯ ಹೊಂಟಾನ ತಂಗಿದೇರ
ದಾರಿಯ ಬಿಡರೆಂದೋ । ಮೈಲಾರಲಿಂಗ"

ರಾವುತರಾಯ ಕೆಂದುಳಿ ಹಾರುತ ಹಿಂದೆ ಹೊಂಟಿರುವುದು ನೋಡಿ ಜಕ್ಕಮ್ಮ-ಲಕ್ಕಮ್ಮರಿಗೆ ವಿಷಯ ತಿಳಿಸಿ ತಪ್ಪಿಸಿಕೊಳ್ಳಲು ಓಡಿ ಹೋಗುತ್ತಾನೆ. ಜಕ್ಕಮ್ಮ-ಲಕ್ಕಮ್ಮರು ಎಂಥಾ ದೈತ್ಯ ಗಂಟು ಬಿದ್ದಾನ ನಮ್ಮ ಅಣ್ಣನಿಗೆ ಎಂದು ಶಿವ ಮತ್ತು ಭೂಮಿ ತಾಯಿಗೆ ವರ ಬೇಡುತ್ತಾರೆ. ನಮ್ಮ ಅಣ್ಣ ಅಡಗಲು ಜಾಗ ಕೊಡು ಎಂದು ಬೇಡಿಕೊಳ್ಳುತ್ತಾರೆ. ಮುಂದಿನ ಮುಚಂಡಿ ಗುಡ್ಡ ಜಕ್ಕಮ್ಮ-ಲಕ್ಕಮ್ಮರ ವರವಿಗಾಗಿ ಬಿಚ್ಚಿಕೊಳ್ಳುತ್ತದೆ. ಓಡಿ ಹೋಗಿ ಧರೆಪ್ಪ ಗುಡ್ಡ ಸೇರುತ್ತಾನೆ. ಅಡ್ಡ ಬಂದ ಜಕ್ಕಮ್ಮ-ಲಕ್ಕಮ್ಮರಿಗೆ "ತಂಗಿದೇರೆ ದಾರಿಯ ಬಿಡರೆಂದು" ವಿನಂತಿಸಿಕೊಳ್ಳುತ್ತಾನೆ. ಭಂಟ ರಾವುತರಾಯನ ವೀರಾವೇಶ ನೋಡಿ ತೇಜಿಯನ್ನು ನಿಲ್ಲಿಸಿ ಕಳಸ ಬೆಳಗುವುದಾಗಿ ಹಟಮಾಡಿ ಅಡ್ಡಗಟ್ಟುತ್ತಾರೆ. ಮುಚಂಡಿ ಧರೆಪ್ಪನ ರುಂಡ ಮುಂಡಗಳು ಹಾದಿ ಬೀದಿಗೆ ಕೆಡವುವವರೆಗೆ ಬಿಡುವುದಿಲ್ಲ ಎಂದು ಬಲಕ್ಕೆ ಬಂದ ಜಕ್ಕಮ್ಮನನ್ನು ಎಡಕ್ಕೆ ಎಸೆದು, ಎಡಕ್ಕೆ ಬಂದ ಲಕ್ಕಮ್ಮನನ್ನು ಬಲಕ್ಕೆ ಎಸೆದು ಓಡಿ ಹೋಗಿ ಬಾಲಿ ಎಸೆಯುತ್ತಾನೆ. ಅಷ್ಟರಲ್ಲಿ ಗುಡ್ಡ ಸೇರಿದ ಧರೆಪ್ಪನಿಗೆ ಈ "ಭವದಲ್ಲಿ ನಿನ್ನ ಮುಖದ ಪೂಜೆ ಆಗುವುದಿಲ್ಲ. ನಿನ್ನ ಕುದುರಿಯ ಬಾಲಕ್ಕೆ ಪೂಜೆ ಆಗಲಿ" ಎಂದು ರಾವುತರಾಯ ಶಾಪ ಹಾಕುತ್ತಾನೆ. ಇಂದಿಗೂ ಈ ಸಂಪ್ರದಾಯ ಧರೆಪ್ಪನ ಗುಡ್ಡದಲ್ಲಿ ಸಾವಿರಾರು ಭಕ್ತರು ಕುದುರಿಯ ಬಾಲಕ್ಕೆ ದರ್ಶನ ಪಡೆಯುತ್ತಿರುವುದು ಕಂಡು ಬರುತ್ತದೆ.

ಮರಳಿ ಬಂದ ರಾವುತರಾಯನಿಗೆ ಜಕ್ಕಮ್ಮ ಲಕ್ಕಮ್ಮರು ಎಂದಿಗೂ ನಿನ್ನ ಹಣೆಗೆ ಬಾಸಿಂಗ ಕಾಣಬಾರದು. ಕೈಗೆ ಕಂಕಣ ಕಟ್ಟಬಾರದು. ಮಕ್ಕಳನ್ನು ಕಾಣದೆ ಇರು ಹೋಗು ಎಂದು ಶಾಪ ಹಾಕುತ್ತಾರೆ. ಭಂಡ ರಾವುತರಾಯ "ಇರಲಿ" ಎಂದು ಹಿಪ್ಪರಗಿ ಗ್ರಾಮಕ್ಕೆ ಬರುತ್ತಾನೆ.

ಭಂಡ ಮಲ್ಲಯ್ಯ ಅನುಭವ ಮಂಟಪದಲ್ಲಿ ಧ್ಯಾನದಲ್ಲಿ ಕುಳಿತಾಗ ರಾವುತರಾಯ ಬಂದು ಶರಣು ಹೊಡೆದು ಮುಚಂಡಿ ಧರೆಪ್ಪನನ್ನು ಗುಡ್ಡ ಸೇರಿಸಿ ಬಂದಿರುವುದಾಗಿ ಹೇಳುತ್ತಾನೆ. ಇಂದಿಗೆ ನಿನ್ನ ಕಾಡಾಟ ದೂರವಾಯಿತು ಏಳುಕೋಟಿ ಮಲ್ಲಯ್ಯ ಮನದಲ್ಲಿ ಸಂತೋಷಪಟ್ಟು ಮುಗುಳು ನಗುತ್ತಾನೆ. ಅಷ್ಟರಲ್ಲಿ ಗಂಗಿ ಮಾಳಮ್ಮಾ ನೀರಿಗೆ ಹೋಗುತ್ತಾಳೆ. ಬಹು ಸುಂದರ ಪದ್ಮಿನಿ ಜಾತಿಯ ಹೆಣ್ಣನ್ನು ಕಂಡು ರಾವುತರಾಯ ಗಾಬರಿಯಾಗಿ ನೋಡುತ್ತಾನೆ. ನಿಮ್ಮ ವಚನದಂತೆ ನಾನು ನಿಮ್ಮ ಕಾಡಾಟ ತಪ್ಪಿಸಿದ್ದೇನೆಂದು ಹೇಳಿ ಬೇಡಿದ್ದು ಕೊಡಬೇಕೆಂದು ಹೇಳುತ್ತಾನೆ.

"ಏನ ಬೇಡತಿ ಬೇಡೋ ರಾವುತ
ಬೇಡಿದ್ದ ಕೊಡುವೆನೋ । ಮೈಲಾರಲಿಂಗ
ಸಿಟ್ಟಿನ ರಾವುತ ಹೇಳತಾನ
ಬವಳೆ ಮಲ್ಲಯಗೋ । ಮೈಲಾರಲಿಂಗ
ನನ್ನ ಹಣಿಗಿ ಬಾಸಿಂಗ ಎಂದು
ಕಂಡಿಲ್ಲ ಅಂದಿದನೋ । ಮೈಲಾರಲಿಂಗ
ನನ್ನ ಕೈಗೆ ಕಂಕಣ ಎಂದು
ಕಂಡಿಲ್ಲಂದಿದನೋ । ಮೈಲಾರಲಿಂಗ
ನೀರಿಗೆ ಹೋಗೋ ರಂಬಿನ
ಕೊಟ್ಟು ಲಗ್ನ ಮಾಡಂದೋ । ಮೈಲಾರಲಿಂಗ ।

ಸಂತೋಷದಲ್ಲಿದ್ದ ಮಲ್ಲಯ್ಯ ಏನು ಬೇಡತಿ ಬೇಡೆಂದು ಕೇಳಿದಾಗ ಸಿಟ್ಟಿನ ರಾವುತರಾಯ ನನ್ನ ಹಣೆ ಎಂದೂ ಬಾಸಿಂಗ ಕಂಡಿಲ್ಲ, ಕೈಗೆ ಕಂಕಣ ಕಂಡಿಲ್ಲ ನೀರಿಗೆ ಹೋಗುವ ರಂಭೆ ಗಂಗಿ ಮಾಳಮ್ಮನನ್ನು ಕೊಟ್ಟು ಮದುವೆ ಮಾಡೆಂದು ಹಟ ಹಿಡಿಯುತ್ತಾನೆ. ಮಲ್ಲಯ್ಯ ಧರ್ಮ ಸಂಕಟದಲ್ಲಿ ಸಿಕ್ಕು ಬೇಡಬಾರದು ಬೇಡಿದೆ ಎಂದು ಗಾಬರಿಯಾಗಿ ಕುಳಿತುಕೊಳ್ಳುತ್ತಾನೆ. ನೇಮ ನಿಷ್ಠೆ, ಲಿಂಗಪೂಜೆಗಳು ಮರೆತು ಚಿಂತೆಯಲ್ಲಿ ತೊಳಲಾಡುತ್ತಾನೆ. ಎಂದಿನ ಮಲ್ಲಯ್ಯ ಇಂದೇಕೆ ಚಿಂತೆಯಲ್ಲಿ ಇದ್ದಾರೆಂದು ಗಂಗಿ ಮಾಳಮ್ಮ ಬಂದು ಕೇಳುತ್ತಾಳೆ.

ನಾನು ಕೊಟ್ಟ ಮಾತಿಗಾಗಿ ರಾವುತರಾಯ ಬೇಡಬಾರದು ಬೇಡಿದ್ದಾನೆ. ನಿನ್ನನ್ನೇ ಕೊಟ್ಟು ಲಗ್ನ ಮಾಡಲು ಹಟ ಹಿಡಿದಿದ್ದಾನೆ. ಗಂಗಿ ಮಾಳಮ್ಮ ಪತಿಗೆ ಇದ್ಯಾವ ದೊಡ್ಡ ಮಾತು ಎಂದು ಸಮಾಧಾನ ಪಡಿಸುತ್ತಾಳೆ. ಇನ್ನು ಮುಂದೆ ಚಿಂತೆ ಬಿಟ್ಟು ಜಾಮ ಜಳಕ ಮಾಡಿ ನೇಮ ನಿಷ್ಠೆಗಳು ಮುಂದುವರೆಸಲು ತಿಳಿಸುತ್ತಾಳೆ. ಗಂಗಿ ಮಾಳಮ್ಮ ಕಂಚ ಕಳಸಾ ತುಂಬಿಕೊಂಡು ಪತಿಯ ಪಾದ ಪೂಜೆ ಮಾಡಿ ಕಳಸ ಬೆಳಗಿ ಅದೇ ಕಳಸ ತೆಗೆದುಕೊಂಡು ರಾವುತರಾಯನಲ್ಲಿಗೆ ಬರುತ್ತಾಳೆ. 'ನೀನು ಹೀಗೆ ಕಳಸ ಬೆಳಗಿದರೆ ನಾನು ಬೆಳಗಿಸಿಕೊಳ್ಳುವುದಿಲ್ಲ, ನನ್ನ ಕೂಡ ಲಗ್ನವಾದ ಮೇಲೆ ಬೆಳಗು' ಎಂದು ಹೇಳುತ್ತಾನೆ. ನನ್ನದೊಂದು ಪ್ರತಿಜ್ಞೆ ಇದೆ, ಅದನ್ನು ಪೂರೈಸಿದರೆ ಮದುವೆಯಾಗುವುದಾಗಿ ಹೇಳುತ್ತಾಳೆ.

"ಏಳುಕೋಟಿಗಳಂಗಳ ಕೂಡಿಸಿ
ಲಗ್ನನಾಗಂದಾಳೋ । ಮೈಲಾರಲಿಂಗ ।
ಕಾಗಿ ಗುಬ್ಬಿಯ ಸುಳವ ಇಲ್ಲದ
ಗಟ್ಟಿ ಕಾಳಂದೋ । ಮೈಲಾರಲಿಂಗ ।
ಸೀಗಿಯ ಹುನವಿಗೆ ಒಮ್ಮೆ ನೀನು
ಮದು ಮಗನಾಗಂದೋ । ಮೈಲಾರಲಿಂಗ ।

ಏಳುಕೋಟಿಗಳಂಗಳ ಕೂಡಿಸಿ, ಕಾಗಿ ಗುಬ್ಬಿಯ ಸುಳುವ ಇಲ್ಲದ ಗಟ್ಟಿ ಕಾಳು ತೆಗೆದುಕೊಂಡು ಸೀಗೆ ಹುಣ್ಣಿಮೆಯ ದಿವಸ ಮದುಮಗನಾಗಿ ಬಂದರೆ ಮದುವೆಯಾಗುತ್ತೇನೆ ಎನ್ನುತ್ತಾಳೆ. ಭಂಡ ರಾವುತರಾಯನಿಗೆ ಇದ್ಯಾವುದು ದೊಡ್ಡದಾಗಿ ಕಾಣುವುದಿಲ್ಲ. ಮಾತಿನಂತೆ ಗಂಗಿ ಮಾಳಮ್ಮ ರಾವುತರಾಯನಿಂದ ವಚನ ಪಡೆದುಕೊಳ್ಳುತ್ತಾಳೆ. ಮುಗುಳುನಗೆ ನಕ್ಕು ಪತಿ ಮಲ್ಲಯ್ಯನಲ್ಲಿಗೆ ಬಂದು ರಾವುತರಾಯನಿಗೆ ಬಲಿಯ ಒಳಗೆ ಹಾಕಿದ್ದೇನೆ. ಇನ್ನು ನೀವು ಚಿಂತೆ ಮಾಡಬೇಡಿರಿ ಎಂದು ಹೇಳುತ್ತಾಳೆ. ಕಾವ್ಯ ಮುಕ್ತಾಯವಾಗುತ್ತದೆ.

## References


1. ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು: ಜಿ.ಶಂ.ಪ. ಪು–249
2. ಮೈಲಾರಲಿಂಗ ಕಾವ್ಯ: ಸಂ. ಡಾ. ಮಂಜುನಾಥ ಬೇವಿನಕಟ್ಟಿ, ಪು–54
3. ಸಾಕ್ಷಾತ್ ವಿಷ್ಣುವೆಂದು ಮೈಲಾರನ ಭಕ್ತರಾದ ಮೈಲಪ್ಪ ಚಿಕ್ಕರೂಗಿಯವರ ನಂಬಿಗೆ, ಮಣಿಮಲ್ಲಾಸೂರನ ವಧೆಗೆ ಶಿವ ಬಂದಾಗ ಅವನ ಹಿಂದೆ ವಿಷ್ಣು ಹೆಗ್ಗಣ ಪ್ರಧಾನಿಯಾಗಿ ಭೂಮಿಗೆ ಬಂದಿರುತ್ತಾನೆ ಎಂಬ ಅಭಿಪ್ರಾಯ ಇವರದಾಗಿದೆ.
4. ಹಾಡು ಹೇಳಿದವರು, ಮೈಲಪ್ಪ ಚಿಕ್ಕರೂಗಿ, ಸ್ಥಳ: ಯಾದಗಿರಿ, ಮೈಲಾಪೂರ.
5. ಹಾಡು ಹೇಳಿದವರು, ಮೈಲಪ್ಪ ಚಿಕ್ಕರೂಗಿ, ಸ್ಥಳ: ಯಾದಗಿರಿ, ಮೈಲಾಪುರ.
6. ಹಾಡು ಹೇಳಿದವರು: ಮೈಲಪ್ಪ ಚಿಕ್ಕರೂಗಿ, ಸ್ಥಳ: ಯಾದಗಿರಿ, ಮೈಲಾಪುರ.
7. ಹಾಡು ಹೇಳಿದವರು: ಮೈಲಪ್ಪ ಚಿಕ್ಕರೂಗಿ, ಸ್ಥಳ: ಯಾದಗಿರಿ, ಮೈಲಾಪುರ.